1904ನೆ ಇಸವಿ ಏಪ್ರಿಲ್ ತಾರೀಖು 17ರಲ್ಲು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧ ಪಟ್ಟ ಡಿಪೋ ಮತ್ತು ಕೋಠಿಗಳಲ್ಲಿ ಪಸಾರ ಜೆಸಕಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ಡಿಪೋ ಯಾ ಕೋಠಿ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸಲ್ಪಡುವ ಆಫಿಸರ ಹೆಸರು.	ಪಸಾರೆ ಜೆನಸು.													
				ಅಳಿಕಾಯಿ.		ಜೆನುಜಪ್ಪ.		ಜೆನುಮೇಣ.		ಸಾರಗದ ಕೊಂಬು.		ಬಿಗ್ಗಕಾಯಿ.		ಅವಲ ಬಿರಗು.		ದುಬ್ಬುಂ ಅರಗು.	
				ಮಣ.	ಪೌಂಡ್	ಮ.	ಪೌ	ಮ.	ಪೌ	ಮ.	ಪೌ	ಮ.	ಪೌ	ಮ.	ಪೌ	ಮ.	ಪೌ
1	ಮೈಸೂರು ವುಡಿಯಾರ್ಸ್.	2—5—04	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	2,423	7	9	17	8	27	11	24	97	...		..	...	..
2	ಶ್ರೀರಂಗಪಟ್ಟಣದಕೋಠಿ	3—5—04		1,678	...	1	26	1	22	....	...		.	44	. .	...	7
3	ಚಾಮರಾಜನಗರದ ಡಿಪೋ.	5—5—04	ಚಾಮರಾಜನಗರದ ರೇಂಜ್ ಆಫಿಸರವರು.	2,000	. .	...	. .	. .	. .	. .	. .	...	. .	...			..
4	ಗುಂಡ್ಲು ಡಿಪೋ ...	7—5—04	ಗುಂಡ್ಲುಪೇಟೆ ಡಿಪೋ	4,000	...	1	26	6	27	1	5	. .	....	. .		...	...
5	ಹುಣಸೂರು ಕೋಠಿ.	9—5—04	ಹುಣಸೂರು ಡಿಪೋ	1,794	21	...	. .	...	. .	....	...		...	...	. .		...

ಷರತ್ತು :—1887ನೆ ಇಸವಿ ಜೂನ್ 18ನೆ ತಾರೀಖಿನ ಮೈಸೂರು ಗೆಜೆಟ್ಟು 287—288ನೆ ಪೇಜುಗಳಲ್ಲಿ ಪ್ರಾಯಿಪು ಆಗಿರುವ 1887ನೆ ಇಸವಿ 11ನೆ ಜೂನ್ ತಾರೀಖಿನ ಮೈಸೂರು ಫಾರೆಸ್ಟ್ ಇಲಾಖಾ ಇನ್‌ಸ್ಪೆಕ್ಟರ್‌ರವರ ನೋಟಿಫಿಕೇಷನ್ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 29ನೆ ಮಾರ್ಚಿ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆಯಾಯ ತಾಲ್ಲೂಕು ಅಮಲ್ದಾರ್ರುಗಳ ಕಛೇರಿಯಲ್ಲಿ, 1904ನೆ ಇಸವಿ ಮೇ ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದ ಹೋಬಳಿ ಜೋಡಿ ಪೋತರಾಜಪಲ್ಲಿ.
2. ಡಿಟೋ ಡಿಟೋ ಜೋಡಿ ಬಡಮಾಕಲಹಳ್ಳಿ.
3. ಮಾಲೂರು ತಾಲ್ಲೂಕು ನರಸಾಪುರದ ಹೋಬಳಿ ಜೋಡಿ ಕೇತಪ್ಪನಹಳ್ಳಿ.
4. ಗೋರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ಖಾಯಂಗುತ್ತಾ ಮುತ್ತಲಹಳ್ಳಿ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಮಾರ್ಚ್ಕಂ 15ನೆ ನಂ. ಮೈಸೂರ ಗೆಜೆಟ್ಟಿನ 2ನೆ ಭಾಗದ 229, 230, 231, 232, 233ನೆ ನಂ. ಪೇಜು ನೋಡತಕ್ಕದ್ದು)

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡಿಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 12ನೆ ಏಪ್ರಿಲ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—1904ನೆ ಇಸವಿ ಜುಲೈ ಗುರೆ) ಲಾಗಾಯಿತು 1906ನೆ ಇಸವಿ ಜೂನ್ ಆಖೈರು ವರಿಗೆ (2 ವರುಷಗಳಿಗೆ) ಕಡೂರು ಡಿಸ್ಟ್ರಿಕ್ಟಿನ ಮೂಡಿಗೆರೆ ತಾಲ್ಲೂಕು ಕೊಟ್ಟಿಗೆಹಾರ (ಬೂಂದು ಘಾಟ) ನೆಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಬರುವ ಮೇ ತಿಂಗಳು 16ನೆ ತಾರೀಖಿನ ದಿನ ಮೂಡಿಗೆರೆ ತಾಲ್ಲೂಕು ಕಛೇರಿ ಬಳಿ ಡೆಪ್ಯೂಟಿ ಕಮಿಷನರ್ ಯಾ ಈ ಕೆಲಸಕ್ಕೆ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಇತರ ತಪಶೀಲುಗಳನ್ನು 1904ನೆ ಇಸವಿ ಏಪ್ರಿಲ್ ತಿಂಗಳು 7ನೆ ತಾರೀಖಿನ ಗೆಜೆಟ್ಟಿನ 217ನೆ ಪೇಜಿನಲ್ಲಿ ಪ್ರಾಯಿಪು ಮಾಡಿರುವ 1904ನೆ ಇಸವಿ ಮಾರ್ಚಿ 31ನೆ ಮಾರ್ಚ್ಕಂ ಮಿನ ಇಸ್ತಿಹಾರ್‌ನಾಮೆಯ ಮೂಲಕ ತಿಳಿದುಕೊಳ್ಳತಕ್ಕದ್ದು.

ತಾರೀಖು 12ನೆ ಏಪ್ರಿಲ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—1904ನೆ ಇಸವಿ ಜುಲೈ ಗುರ್ತಿ ಲಾಗಾಯತು 1905ನೆ ಇಸವಿ ಜೂನ್ ಆಖ್ಯೆರು ವರಿಗೆ (1 ವರುಸಕ್ಕೆ) ಕಡೂರು ಡಿಸ್ಟ್ರಿಕ್ಟಿನ ಇದ್ದಾಡಿ ಕಾಣಿಕಿರುವ ಟೋಲು ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಅವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ಟೋಲು ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡಿಯುವ ಸ್ಥಳ.
1	ಬಾಳೆಹೊನ್ನೂರು (ಭದ್ರಾನದಿ ಸೇತುವೆ) ...	23ನೆ ಮೇ 1904.	ಬಾಳೆಹೊನ್ನೂರು ಮುಸಾಫರ್ ಬಂಗ್ಲೆಯಲ್ಲಿ.
2	ತಡಸ (ಭದ್ರಾನದಿ ಸೇತುವೆ) ...	23ನೆ ಡಿಟೋ	ಯಡೆಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ.
3	ಹರಿಹರಪ್ರ (ತುಂಗಾನದಿ ಸೇತುವೆ) ..	25ನೆ ಡಿಟೋ	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.

ಇತರ ತಪಶೀಲುಗಳನ್ನು 1904ನೆ ಇಸವಿ ಏಪ್ರಿಲ್ ತಿಂಗಳು 7ನೆ ತಾರೀಖಿನ ಗೆಜೆಟ್ಟಿನ 218ನೆ ಪೇಜಿನಲ್ಲಿ ಘೋಷಿಸಿ ಮಾಡಿರುವ 1904ನೆ ಇಸವಿ ಮಾರ್ಚಿ 31ನೆ ಮಂಗಳವಿನ ಪುರು ಇಸ್ತಿಹಾರ್ನಾಮೆಯ ಮೂಲಕ ತಿಳಿದುಕೊಳ್ಳತಕ್ಕದ್ದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಪೇಜು 217. IIನೆ ಭಾಗ. 3ನೆ ಪ್ಯಾರಾದಲ್ಲಿ.

(1)ನೆ ಕಂಗಿ ಯ ಲ್ಲಿ.—"ಎಂಟು ಖಿಸ್ತುಗಳಾಗಿ" ಎನ್ನುವದಕ್ಕೆ ಬದಲಾಗಿ "ಹದಿನಾರು ಖಿಸ್ತುಗಳಾಗಿ" ಎಂತಲೂ;

7ನೆ ಕಂಡ್ಯಾಯಲ್ಲಿ.—"9, 10, 11 ಮತ್ತು 12ನೆ ಖಿಸ್ತುಗಾಗಿ" ಎನ್ನುವದಕ್ಕೆ ಬದಲಾಗಿ "ಬಾಕಿ ಖಿಸ್ತುಗಳಿಗೆ" ಎಂತಲೂ; ಓದುವದು.

ಎ. ವೇದಾಂತದೇಸಿಗಂ ಅಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 23ನೆ ಮಾಹೆ ಏಪ್ರಿಲ್ 1904.

ಸ್ ಈ 1904ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1905ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು ಪಗ್ಗೆರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ಈ 49 ಮತ್ತು 51ನೆ ಸೆಕ್ಷನ್‌ಗಳಲ್ಲಿ ನಮೂದಿರುವ ಪರತ್ತುಗಳಿಗೆ ವಳಪಡಿಸಿ ಪ್ರತಿಬಂದು ಟೋಲುಗೇಟುಲ್ಲಿಯಾಗಲಿ ಅಥವಾ ದರೋಬಸ್ತು ಗೇಟುಗಳಲ್ಲಿದ್ದಾಗಲಿ, ಟೋಲು ವಸೂಲ್ಮಾಡುವ ಬಾಬನ್ನು 1904ನೆ ಇಸವಿ ಮೇ ಮಾಹೆ ತಾರೀಖು 14ನೆ ಮಧ್ಯಾನ್ನ 1 ಘಂಟೆಯ ಲಾಗಾಯಿತು ರಂಗಾಚಾರ್ಲು ಯವರ ಮುಕೋದ್ದುಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ, ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಒರುವ ಗಾಡಿ ಪಗ್ಗೆರೆಗಳ ಮೇಲೆ ಟೋಲು ವಸೂಲ್ಮಾಡತಕ್ಕದ್ದು. ಹಚ್ಚು ರೇಟನ್ನು ವಸೂಲ್ಮಾಡಕೂಡದು ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲು ಮಾಹೆ ತಾರೀಖು ನಿಕಿ ಟೋಲು ವಾವತಿ ಮಾಡತಕ್ಕ ಆಸಾಮಿಗಳಿಗೆ ರಸೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖುವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ವಾವತಿ ಮಾಡಬೇಕು. ಹರಾಜು ಆಖ್ಯೆರಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮಾನವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಪರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಲ್ಲಿರುವ ಮೊಬಲಗನ್ನು ಆಖ್ಯೆರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖ್ಯೆರಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ, ಖರ್ಚಿಗು ಮತ್ತು ಲುಕ್ಸಾನಿಗೂ, ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್ಮಾಡಲ್ಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ಮುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತು ದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ದರಖಾಸ್ತು ದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.